ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಡಿಸೆಂಬರ್ 1990ರ ಅಂತ್ಯದವರೆಗೆ ಕುಣಿಗಲ್ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ಬಂದಿರುವ ಅರ್ಜಿಗಳ ಸಂಖ್ಯೆ 734

ಆ) ಡಿಸೆಂಬರ್ 1990ರ ಅಂತ್ಯದ ವೇಳೆಗೆ ಇವುಗಳಲ್ಲಿ 266 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ.

ಇ) 31ನೇ ಡಿಸೆಂಬರ್ 1990ರಲ್ಲಿರುವಂತೆ ಕುಣಿಗಲ್ ತಾಲ್ಲೂಕಿನಲ್ಲಿ ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ 468 ಅರ್ಜಿಗಳು ಬಾಕಿ ಉಳಿದಿದ್ದವು.

ಈ) ಬಾಕಿ ಉಳಿದಿರುವ 468 ಅರ್ಜಿಗಳಲ್ಲಿ, 195 ಅರ್ಜಿದಾರರ ಮಂಡಳಿಯ ನಿಯಮಗಳನ್ನು ಪಾಲಿಸಿದ್ದಾರೆ. ಇವರುಗಳಿಗೆ ವಿದ್ಯುತ್ ಸಂಪರ್ಕವನ್ನು ಶೀಘ್ರದಲ್ಲಿ ಒದಗಿಸಲಾಗುವುದು. ಉಳಿದ 273 ಅರ್ಜಿದಾರರು, ಮಂಡಳಿಯ ನಿಯಮಗಳನ್ನು ಪಾಲಿಸಿದ ಬಳಿಕ ವಿದ್ಯುತ್ ಸಂಪರ್ಕಕ್ಕೆ ವ್ಯವಸ್ಥೆ ಮಾಡಲಾಗುವುದು.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಕುರಿತು

467 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಕಳೆದ 2 ವರ್ಷಗಳಲ್ಲಿ ಲಾಭದಾಯಕವಾಗಿದೆಯೇ ಅಥವಾ ನಷ್ಟದಲ್ಲಿ ಇದೆಯೇ? ನಿಗಮದಲ್ಲಿ ಮೀನನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದರಲ್ಲಿ ಅಳವಡಿಸಲಾದ ವ್ಯವಸ್ಥೆಗಳಾವವು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು 1988-89 ನೇ ಸಾಲಿನಲ್ಲಿ ಲಾಭವನ್ನೂ ಹಾಗೂ 1989-90 ರಲ್ಲಿ ನಷ್ಟವನ್ನೂ ಅನುಭವಿಸಿರುತ್ತದೆ. ನಿಗಮ ಮೀನನ್ನು ಸ್ಪರ್ಧಾತ್ಮಕ ದರಗಳಲ್ಲಿ ಖರೀದಿಸುವುದು. ಮಾರಾಟ ದರವನ್ನು ಖರೀದಿ ದರ, ಸಂಸ್ಕರಣಾ ವೆಚ್ಚ ಮತ್ತು ಸಂಭವನೀಯ (incidental) ಖರ್ಚುಗಳನ್ನು ಗಣನೆಗೆ ತೆಗೆದುಕೊಂಡು ನಿಗದಿಪಡಿಸಲಾಗಿದೆ.

ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುದ್ದೀಕರಣವಾಗದೆ ಇರುವುದು

468 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚೆನ್ನಪಟ್ಟಣದ ತಾಲ್ಲೂಕಿನಲ್ಲಿ ವಿದ್ಯುತ್ ಮಂಡಳಿಯ ಗುರಿಯನ್ನು ಸಾಧಿಸಲು ಬೇಕಾಗಿರುವ ಲೈನು ಸಾಮಾಗ್ರಿಗಳನ್ನು ಒದಗಿಸಲು ಸರ್ಕಾರವು ತೆಗೆದುಕೊಂಡ ಕ್ರಮ.

ಆ) ಸರ್ವೀಸ್ ಕನೆಕ್ಷನ್‌ಗಾಗಿ ನೀರಾವರಿ ಪಂಪು ಸೆಟ್ಟುಗಳು ವಿದ್ಯುದ್ದೀಕರಣವಾಗದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಯಾವಾಗ ಅದನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಳೆದ ಮೂರು ತಿಂಗಳಲ್ಲಿ ಕೆ.ಇ.ಬಿ. ಚನ್ನಪಟ್ಟಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಲೈನು ಸಾಮಾಗ್ರಿಗಳನ್ನು ಸರಬರಾಜು ಮಾಡಲು ಕ್ರಮ ತೆಗೆದು ಕೊಂಡಿದೆ.

ಆ) ಈ ಸಾಲಿನಲ್ಲಿ (1990-91) ಚನ್ನಪಟ್ಟಣ ತಾಲ್ಲೂಕಿನಲ್ಲಿ ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣಕ್ಕೆ ನಿಗಧಿ ಪಡಿಸಿರುವ ಗುರಿ 850 ಆಗಿದ್ದು ಫೆಬ್ರವರಿ 91ರ ಅಂತ್ಯದವರೆಗೆ 719 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ. ಬಾಕಿ